**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 1082/2022**

| | | | |
|---|---|---|---|
| **ಹೆಸರು** | **:** | **ಶ್ರೀಮಂತ** | **ಚಾ.ಸಾ. 6** |
| **ತಂದೆಯ ಹೆಸರು** | **:** | **ಆಶಣ್ಣ** | **ಪ್ರಾ.ಸಾ. 3** |
| **ವಯಸ್ಸು** | **:** | **32 ವರ್ಷ** | **ದಿನಾಂಕಃ 04-07-2026** |
| **ಉದ್ಯೋಗ** | **:** | **ಕೂಲಿ ಕೆಲಸ** | |
| **ವಾಸಸ್ಥಳ** | **:** | **ಮಿರಿಯಾಣ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿದಾರರು ಗುರುತಿಸಿರುವುದಿಲ್ಲ. ಸದರಿ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಮೃತ ರಾಣೋಜಿ ನನಗೆ ಪರಿಚಯ. ಹೇಗೆ ತೀರಿ ಹೋಗಿದ್ದಾನೆ ಎಲ್ಲಿ ತೀರಿ ಹೋಗಿದ್ದಾನೆ ಅಂತ ಮಾಹಿತಿ ನನಗೆ ಇಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ದೂರು ಮತ್ತು ಪಂಚನಾಮೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕ 02-05-2022 ರಂದು ಸಂಜೆ ನಾನು ಮತ್ತು ಚಾಸಾ-7ರವರು ದಾಬಾಕ್ಕೆ ಊಟ ಮಾಡಲು ಹೋಗಿದೇವು ಎಂದರೆ ಸರಿಯಲ್ಲ. ಕೆಲಸ ಮುಗಿಸಿಕೊಂಡು ರಾತ್ರಿ ಸುಮಾರು 11 ಗಂಟೆಗೆ ಬರುವಾಗ ಮಾನಸ ದಾಬಾ ದಾಟಿ ಮಿರಿಯಾಣ ಕಡೆಗೆ ಹೋಗುವ ಅಂದಾಜು ಅರ್ಧ ಕಿ.ಮೀ. ಅಂತರದಲ್ಲಿರುವ ಚಿಂಚೋಳಿ ತಾಂಡೂರು ಕಡೆಗೆ ಹೋಗುವ ಮುಖ್ಯ ರಸ್ತೆಯಲ್ಲಿ ಎಡಭಾಗಕ್ಕೆ ನಡೆದುಕೊಂಡು ಹೋಗುವಾಗ ಹಿಂದೆಯಿಂದ ಕಲ್ಲೂರ ಕಡೆಯಿಂದ ಮಿರಿಯಾಣ ಕಡೆಗೆ ಹೋಗುತ್ತಿದ್ದ ಮೋಟರ ಸೈಕಲ ಸಂಖ್ಯೆ KA 32 EX 3373 ನೇದನ್ನು ಚಲಾಯಿಸಿಕೊಂಡು ಹೊರಟಿದ್ದ ಆರೋಪಿತ ಅತೀ ವೇಗ ಮತ್ತು ನಿಸ್ಕಾಳಜಿಯಿಂದ ನಡೆಸಿಕೊಂಡು ಬಂದು ರಾಣೋಜಿ ರಾವರವರಿಗೆ ಹಿಂಭಾಗದಿಂದ ಡಿಕ್ಕಿ ಹೊಡೆದು ಅಪಘಾತ ಪಡಿಸಿ, ಬಿದ್ದ ಪರಿಣಾಮವಾಗಿ ತಲೆಗೆ ಹಾಗೂ ಇನ್ನಿತರೇ ಕಡೆಗೆ ಭಾರಿ ಗಾಯವಾಗಿ ಮೋಟರ ಸೈಕಲನ ಚಾಲಕನಾದ ಆರೋಪಿ ಮೋಟರ ಸೈಕಲನ್ನು ಬಿಟ್ಟು ಹೋಗಿದ್ದನು ಅಂತ ತಿಳಿಸಿದ್ದರು ಎಂದರೆ ಸರಿಯಲ್ಲ. ಚಾಸಾ-1 ಮತ್ತು ಚಾಸಾ-5ರವರು ಸ್ಥಳಕ್ಕೆ ಬಂದು ನೋಡಲಾಗಿ ರಾಣೋಜಿ ರಾವಗೆ ಬಾರಿ ಪೆಟ್ಟುಗಾಗಿ ಮುಗಿನಿಂದ ಮತ್ತು ಕಿವಿಗಳಿಂದ ರಕ್ತ

ಸ್ರಾವವಾಗುತ್ತಿತ್ತು ಎಂದರೆ ಸರಿಯಲ್ಲ. ಆತನು ಮಾತನಾಡುವ ಸ್ಥಿತಿಯಲ್ಲಿರದೇ ಮೂರ್ಚೆ ಹೋಗಿದ್ದ ಎಂದರೆ ಸರಿಯಲ್ಲ. ನಾವು ಇಬ್ಬರು ಕೂಡಿ ಆತ ಉಪಚಾರಕ್ಕೆಂದು ತಾಂಡೂರು ಬಾಲಾಜಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವೆ ಎಂದರೆ ಸರಿಯಲ್ಲ. ಹೆಚ್ಚಿನ ಚಿಕಿತ್ಸೆಗಾಗಿ ಹೈದ್ರಾಬಾದಗೆ ತೆರಳುತ್ತಿರುವಾಗ ದಾರಿಯ ಮಧ್ಯದಲ್ಲಿ ರಾಣೋಜಿ ಮೃತ ಪಟ್ಟಿದ್ದ ಎಂದರೆ ಸರಿಯಲ್ಲ. ಈ ರೀತಿಯಾಗಿ ನಾನು ಹೇಳಿ ದಿನಾಂಕ 04-05-2022 ರಂದು ಪೋಲಿಸರಿಗೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಈಗ ಸಾಕ್ಷಿದಾರರ ಸದರಿ ಹೇಳಿಕೆಯ ಓದಿ ಹೇಳಲಾಗಿ ಸಾಕ್ಷಿದಾರರು ನಿರಾಕರಿಸಿರುತ್ತಾರೆ. ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ-6 ಎಂದು ಗುರುತಿಸಲಾಯಿತು.

**ವಾಟೀ ಸವಾಲುಃ ಆರೋಪಿ ಪರವಾಗಿ ವಕೀಲರಿಂದಃ ಇಲ್ಲಾ.**

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**